ಪಿರಿಯಾಪಟ್ಟಣದ ಸರ್ಕಾರಿ ಬಾಲಕಿಯರು ಪ್ರೌಢ ಶಾಲೆಯನ್ನು ಮೇಲ್ದರ್ಜೆಗೇರಿಸುವುದು

93 (975) ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪಿರಿಯಾಪಟ್ಟಣದಲ್ಲಿರುವ ಬಾಲಕಿಯರ ಪ್ರೌಢ ಶಾಲೆಯನ್ನು ಮೇಲ್ದರ್ಜೆಗೇರಿಸಿ ಪದವಿ ಪೂರ್ವ ಕಾಲೇಜನ್ನಾಗಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

2. ಹಾಗಿದ್ದಲ್ಲಿ, ಹಾಲಿ ಶೈಕ್ಷಣಿಕ ವರ್ಷದಿಂದಲೇ ಮೇಲ್ದರ್ಜೆಗೇರಿಸಲಾಗುವುದೇ?

ಪ್ರೊ. ಬಿ.ಕೆ.ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

1. ಇಲ್ಲ

2. ಪ್ರಶ್ನೆ ಸಂಖ್ಯೆ: (ಅ) ಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೆ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸಲು ಆಯವ್ಯಯದಲ್ಲಿ ಅವಕಾಶವಿರುವುದಿಲ್ಲ. ರಾಜ್ಯದಲ್ಲಿ ಈಗಿರುವ ಸಾಕಷ್ಟು ಪದವಿ ಪೂರ್ವ ಕಾಲೇಜುಗಳಲ್ಲಿಯ ಮೂಲಭೂತ ಸೌಲಭ್ಯಗಳನ್ನು ಸಧೃಡಗೊಳಿಸುವುದು ಸರ್ಕಾರದ ಆದ್ಯತೆ ವಿಷಯವಾಗಿದೆ. ಆದಕಾರಣ ಹೊಸ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

ಶ್ರೀ ಹೆಚ್.ಸಿ. ಬಸವರಾಜು: ಸನ್ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಮಾನ್ಯ ಸಚಿವರು ಇಲ್ಲ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರ ಸರಿಯಲ್ಲ. ಕಳೆದ ಎರಡು ವರ್ಷಗಳ ಹಿಂದೆಯೇ, ಅಂದು ಡಿ.ಡಿ.ಪಿ.ಐ. ಆಗಿದ್ದಂಥ ನಾಗರಾಜುರವರು ಅಲ್ಲಿ ಬಂದು ಸ್ಥಳವನ್ನು ಪರಿಶೀಲಿಸಿ, ಅಲ್ಲಿ ಅತ್ಯಾವಶ್ಯಕವಾಗಿ ಒಂದು ಬಾಲಕಿಯರ ಜ್ಯೂನಿಯರ್ ಕಾಲೇಜು ಬೇಕು ಎಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ಈಗಿರತಕ್ಕಂಥ ಕಾಲೇಜಿನಲ್ಲಿ ಸುಮಾರು 200-250 ಬಾಲಕಿಯರು ಮೊದಲನೇ ವರ್ಷದ ಪಿ ಯು ಸಿ ಯಲ್ಲಿ ಓದುತ್ತಿದ್ದಾರೆ. ಆದರೆ ಅಲ್ಲಿ ಹೆಚ್ಚು ಸ್ಥಳಾವಕಾಶವಿಲ್ಲ. ಈ ವರ್ಷ ಹೆಚ್ಚುವರಿಯಾಗಿ ಎಸ್ ಎಸ್ ಎಲ್ ಸಿ ಪಾಸ್ ಆಗಿರತಕ್ಕಂಥವರು ಸುಮಾರು 50 ಜನರಿದ್ದಾರೆ. ಆದ್ದರಿಂದ, ಹಾಲಿ ಇರತಕ್ಕಂಥ ಬಾಲಕಿಯರ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಬೇಕು ಎನ್ನುವ ಪ್ರಸ್ತಾವನೆಯನ್ನು ಈಗಾಗಲೇ ಕಳುಹಿಸಲಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಸರ್ಕಾರ ಇದನ್ನು ಪುನರ್ ಪರಿಶೀಲಿಸಿ ಕೂಡಲೇ ಅಂದರೆ ಈ ವರ್ಷವೇ ಅಲ್ಲಿರತಕ್ಕಂಥ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ, ಬಾಲಕಿಯರ ಪದವಿಪೂರ್ವ ಕಾಲೇಜನ್ನು ಪ್ರಾರಂಭ ಮಾಡಬೇಕು. ಹೊಸದಾಗಿ ಕಾಲೇಜನ್ನು ಮಾಡಲು ಸಾಧ್ಯವಾಗದಿದ್ದರೆ, ಈಗಿರತಕ್ಕಂಥ ಕಾಲೇಜುಗಳಲ್ಲಿ ಎಲ್ಲಿ ಬೇಡಿಕೆಯಿಲ್ಲ, ಎಲ್ಲಿ ವಿದ್ಯಾರ್ಥಿಗಳಿಲ್ಲ ಅಂಥವುಗಳಲ್ಲಿ ಒಂದನ್ನು ನಮ್ಮ ಪಿರಿಯಾಪಟ್ಟಣಕ್ಕೆ ಸ್ಥಳಾಂತರಿಸಿ ಒಂದು ಬಾಲಕಿಯರ ಜೂನಿಯರ್ ಕಾಲೇಜನ್ನು ಮಾಡಿಕೊಡಬೇಕು ಎಂದು ನಾನು ಮಾನ್ಯ ಸಚಿವರನ್ನು ಕೇಳಲು ಇಚ್ಛಿಪಡುತ್ತೇನೆ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯಾದಂಥ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲ. ಅಲ್ಲಿ ಈಗಾಗಲೇ ಕೊಠಡಿಗಳು ಇವೆ. ಇದರ ಬಗ್ಗೆ ಸರ್ಕಾರ ಕೂಡಲೇ

ಆದೇಶ ನೀಡಿ ಈ ವರ್ಷದಿಂದಲೇ ಬಾಲಕಿಯರ ಪದವಿಪೂರ್ವ ಕಾಲೇಜನ್ನು ಪ್ರಾರಂಭ ಮಾಡಬೇಕು. ಕಾಲೇಜು ಇಲ್ಲದೆ ಅಲ್ಲಿ ಬಾಲಕಿಯರು ಬಹಳಷ್ಟು ಕಷ್ಟ ಅನುಭವಿಸುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಲು ಇಷ್ಟಪಡುತ್ತೇನೆ.

ಪ್ರೊ. ಬಿ.ಕೆ.ಚಂದ್ರಶೇಖರ್: ಕೆಲವು ಅಂಕಿ ಅಂಶಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ನಾನು ಇಷ್ಟಪಡುತ್ತೇನೆ. ಈಗ ಅಲ್ಲಿ ಒಂದು ಜೂನಿಯರ್ ಕಾಲೇಜು ಇದೆ. ಅದು ಕಂಬೈನ್ಡ್ ಎಜುಕೇಷನ್ ಕಾಲೇಜು. ಅಲ್ಲಿ ನಾಲ್ಕು ಸೆಕ್ಷನ್‌ಗಳಿವೆ. ಜಾಬ್ ಓರಿಯೆಂಟೆಡ್ ಕೋರ್ಸ್‌ನ ಬೇರೆ ಮೂರು ಸೆಕ್ಷನ್‌ಗಳಿವೆ. ಇವೆಲ್ಲವೂ ಉಪಯೋಗವಾಗುತ್ತಿವೆ. ಮೊದಲನೇ ವರ್ಷದ ಪಿ ಯು ಸಿ ಯಲ್ಲಿ 150 ಹೆಣ್ಣು ಮಕ್ಕಳು, 170 ಹುಡುಗರು ಓದುತ್ತಿದ್ದಾರೆ. ಎರಡನೇ ವರ್ಷದಲ್ಲಿ 140 ಹುಡುಗರು, 88 ಹೆಣ್ಣು ಮಕ್ಕಳು ಓದುತ್ತಿದ್ದಾರೆ. ಇದರ ಜೊತೆಗೆ, ಪಿರಿಯಾಪಟ್ಟಣದಲ್ಲಿ ಇನ್ನೊಂದು ಖಾಸಗಿ ಪದವಿಪೂರ್ವ ಕಾಲೇಜು ಇದೆ. ಅಲ್ಲಿ ಮೊದಲನೇ ವರ್ಷದಲ್ಲಿ 20 ಹೆಣ್ಣು ಮಕ್ಕಳು, ಎರಡನೇ ವರ್ಷದಲ್ಲಿ 40 ಹೆಣ್ಣುಮಕ್ಕಳು ಓದುತ್ತಿದ್ದಾರೆ. ಅಂದರೆ ಹೆಣ್ಣುಮಕ್ಕಳಿಗೆ ಅಲ್ಲೂ ಕೂಡ ಸಾಕಷ್ಟು ಅವಕಾಶವಿದೆ. ಇದರ ಜೊತೆಗೆ ಬಸವೇಶ್ವರ ಪಿ ಯು ಕಾಲೇಜು, ಪಿರಿಯಾಪಟ್ಟಣ, ಇಲ್ಲೂ ಕೂಡ ಎರಡೂ ವರ್ಷಗಳಲ್ಲಿ ತಲಾ 20 ಹೆಣ್ಣುಮಕ್ಕಳು ಓದುತ್ತಿದ್ದಾರೆ. ಆದ್ದರಿಂದ, ಅಲ್ಲಿ ಸಾಕಷ್ಟು ಸ್ಕೋಪ್ ಇದೆ. ಹೊಸ ಕಾಲೇಜು ಮಾಡುತ್ತೇವೆ ಎಂದು ಹೇಳಿಬಿಡಬಹುದು. ಆದರೆ ಅದಕ್ಕೆ ಬೇಕಾದ ಎಲ್ಲಾ ರೀತಿಯ ಸೌಕರ್ಯ, ಸವಲತ್ತುಗಳನ್ನು ಕೊಡಲು ಕಷ್ಟವಾಗುತ್ತದೆ. ಈಗಾಗಲೇ ಅಲ್ಲಿ ಇರುವ ಕಾಲೇಜುಗಳ ಅಂಕಿಅಂಶಗಳನ್ನು ತರಿಸಿ ಉತ್ತರ ಕೊಟ್ಟಿದ್ದೇನೆ. ಸದ್ಯಕ್ಕೆ ಅವುಗಳು ಸಾಕು ಎಂದು ನನಗೆ ಅನ್ನಿಸಿದೆ. ಈಗ ನಮಗೆ ಪ್ರಸ್ತಾವನೆ ಬಂದಿಲ್ಲ. ಮುಂದೆ ಖಂಡಿತವಾಗಿಯೂ ಇದನ್ನು ಪರಿಶೀಲಿಸಿ ನೋಡೋಣ.

ಶ್ರೀ ಹೆಚ್.ಸಿ. ಬಸವರಾಜು: ಅಲ್ಲಿರತಕ್ಕಂಥ ಕಾಲೇಜುಗಳಲ್ಲಿ ಒಂದು ಖಾಸಗೀ ಕಾಲೇಜು. ಖಾಸಗೀ ಕಾಲೇಜಿನಲ್ಲಿ ಬಡವರ ಮಕ್ಕಳು ಓದಲು ಸಾಧ್ಯವಿಲ್ಲ. ಅಲ್ಲಿ ತೆಗೆದುಕೊಳ್ಳತಕ್ಕಂಥ ಡೊನೇಷನ್, ಫೀಸ್ ಇವುಗಳಿಂದ ಜನಸಾಮಾನ್ಯರ ಮಕ್ಕಳು ಅಲ್ಲಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಅಲ್ಲಿ ಇರತಕ್ಕಂಥ ಸರ್ಕಾರೀ ಬಾಲಕಿಯರ ಪ್ರೌಢಶಾಲೆಯಲ್ಲಿ ಕೊಠಡಿಗಳು ಇವೆ ಮತ್ತು ಯಾವುದೇ ಸಮಸ್ಯೆ ಇಲ್ಲ. ಆದ್ದರಿಂದ, ಬೇರೆ ಸ್ಥಳಗಳಲ್ಲಿರುವ ಕಾಲೇಜುಗಳಲ್ಲಿ ಎಲ್ಲಿ ಬಾಲಕಿಯರಿಲ್ಲ, ಎಲ್ಲಿ ಬೇಡಿಕೆಯಿಲ್ಲ ಅಂಥ ಕಾಲೇಜುಗಳನ್ನು ಸ್ಥಳಾಂತರಿಸಲು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ. ಅದರಲ್ಲಿ ನಮ್ಮ ಪಿರಿಯಾಪಟ್ಟಣಕ್ಕೆ ಆದ್ಯತೆ ಕೊಟ್ಟು ಈ ವರ್ಷ ಒಂದು ಕಾಲೇಜನ್ನು ಕೊಡಿ. ಬಡವರ ಮಕ್ಕಳು ಬಹಳಷ್ಟು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಖಾಸಗೀ ಕಾಲೇಜು ಇದೆ ಎಂದು ಹೇಳತಕ್ಕಂಥಾದ್ದು ಸರಿಯಾದುದಲ್ಲ. ಖಾಸಗೀ ಕಾಲೇಜಿನಲ್ಲಿ ಬಡವರು ಯಾರೂ ಓದಲು ಸಾಧ್ಯವಾಗುತ್ತಿಲ್ಲ. ದಯಮಾಡಿ ಸರ್ಕಾರ ಇದರ ಬಗ್ಗೆ ಪುನರ್ ಪರಿಶೀಲಿಸಬೇಕು.

ಪ್ರೊ. ಬಿ.ಕೆ. ಚಂದ್ರಶೇಖರ್: ಅಲ್ಲಿ ಸರ್ಕಾರಿ ಕಾಲೇಜಿದೆ. ಆಗಿ ನಡೆಸುತ್ತಿದ್ದೇವೆ. ಅಲ್ಲಿ ಒಟ್ಟು ಏಳು ಸೆಕ್ಷನ್‌ಗಳು ನಡೆಯುತ್ತಿವೆ. ಅದರಲ್ಲಿ ಹೆಣ್ಣುಮಕ್ಕಳಿಗೆ ಇನ್ನೂ ಸಾಕಷ್ಟು ಅವಕಾಶವಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳ ಕಾಲೇಜು ಮಾಡಬೇಕು ಎಂದರೆ ಅಲ್ಲಿ ಅವುಗಳಿಗೆ ಸ್ಟ್ರೆಂಗ್ ಕೂಡ ಬರುವುದಿಲ್ಲ.

ಶ್ರೀ ಹೆಚ್.ಸಿ. ಬಸವರಾಜು: ಈಗ ಅಲ್ಲಿರತಕ್ಕಂಥ ಸರ್ಕಾರೀ ಪದವಿಪೂರ್ವ ಕಾಲೇಜಿನಲ್ಲಿ ಈಗಾಗಲೇ 490 ವಿದ್ಯಾರ್ಥಿಗಳಿದ್ದಾರೆ. ಅದರಲ್ಲಿ ಸುಮಾರು 150 ಹೆಣ್ಣು ಮಕ್ಕಳಿದ್ದಾರೆ. ಈಗ ಎಸ್ ಎಸ್ ಎಲ್ ಸಿ ಪಾಸ್ ಆದವರು ಸೇರಿದರೆ ಒಟ್ಟು 200 ಹೆಣ್ಣುಮಕ್ಕಳಿದ್ದಾರೆ. ಇನ್ನೂ 50 ಜನ ಬಾಲಕಿಯರು ಪ್ರವೇಶ ಇಲ್ಲದೇ ಬೀದಿ ಪಾಲಾಗಿದ್ದಾರೆ. ಇಲ್ಲಿ ಸ್ಕೋಪ್ ಇದೆ, ಕಾಲೇಜು ಮಾಡಬಹುದು ಎನ್ನುವ ಪ್ರಸ್ತಾವನೆ ಸರ್ಕಾರಕ್ಕೆ ಎರಡು ವರ್ಷಗಳ ಹಿಂದೆಯೇ ಬಂದಿದೆ. ಆದರೆ ಸರ್ಕಾರ ಪ್ರಸ್ತಾವನೆ ಬಂದಿಲ್ಲ ಎಂದು ಹೇಳುತ್ತಿದೆ. ಕಳೆದ ಎರಡು ತಿಂಗಳ ಹಿಂದೆ ನಾನೂ ಕೂಡ ಈ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ, ದಯಮಾಡಿ ತಾವು ಕೂಡಲೇ ಪ್ರಸ್ತಾವನೆ ತರಿಸಿಕೊಳ್ಳಬೇಕು. ಅಲ್ಲಿ ಅರ್ಹತೆ ಇದೆ, ಆಧಾರವಿದೆ, ಬೇಡಿಕೆ ಹೆಚ್ಚು ಇದೆಯಾದ್ದರಿಂದ ದಯಮಾಡಿ ಅಲ್ಲಿಗೆ ಒಂದು ಕಾಲೇಜನ್ನು ಸ್ಥಳಾಂತರಿಸಿ ಕೊಡಬೇಕು. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯಾದಂಥ ಹೆಚ್ಚುವರಿ ಖರ್ಚು ಬರುವುದಿಲ್ಲ ಎನ್ನುವುದನ್ನು ತಮ್ಮ ಮೂಲಕ ಕೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು: ಆಯಿತು, ಈಗ ಮುಂದಿನ ಪ್ರಶ್ನೆ.

ಶ್ರೀ ಹೆಚ್.ಸಿ. ಬಸವರಾಜು: ಈ ರೀತಿ ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸದಿದ್ದರೆ ಅದಕ್ಕೆ ನಮ್ಮ ವಿರೋಧವಿದೆ. ಅಲ್ಲಿ ಕಾಲೇಜು ಬೇಕು. ಸುಮಾರು 50 ಜನ ಹೆಣ್ಣುಮಕ್ಕಳು ಪ್ರವೇಶವಿಲ್ಲದೇ ಇವತ್ತು ಹೊರಗಡೆಯಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರ ಇಷ್ಟು ಉದ್ಧಟತನದಿಂದ ಏನೂ ಹೇಳುವುದಿಲ್ಲ ಎಂದರೆ ನಮ್ಮ ಹಕ್ಕಿಗೆ ಚ್ಯುತಿಯಾಗುತ್ತದೆ. ನಮ್ಮ ಕ್ಷೇತ್ರದ ವಿದ್ಯಾರ್ಥಿನಿಯರು ಬೀದಿ ಪಾಲಾಗಿದ್ದಾರೆ. ಸರ್ಕಾರ ನಮ್ಮ ಸಹಾಯಕ್ಕೆ ಬರಬೇಕು ಎಂದು ಕೇಳುತ್ತಿದ್ದೇನೆ.

ಪ್ರೊ. ಬಿ.ಕೆ. ಚಂದ್ರಶೇಖರ್: ಹೊರಗಿರುವ ಆ 50 ಹೆಣ್ಣುಮಕ್ಕಳಿಗೆ ಈಗಿರತಕ್ಕ ಕಾಲೇಜಿನಲ್ಲಿ ನಾವು ಅವಕಾಶ ಕೊಡಿಸುತ್ತೇವೆ.

ಶ್ರೀ ಹೆಚ್.ಸಿ.ಬಸವರಾಜು: ಅಧ್ಯಕ್ಷರೇ, ತಾವು ನಮ್ಮ ಸಹಾಯಕ್ಕೆ ಬರಬೇಕು.

MR. SPEAKER: I cannot compel a Minister to reply according to your taste.

SRI H.C. BASAVARAJ: Not like that. The Government cannot deny it.

ಅಧ್ಯಕ್ಷರು: ಮುಂದಿನ ಪ್ರಶ್ನೆ ಪಿ.ಹೆಚ್.ಪೂಜಾರ್‌ರವರದು. ತಾವು ಪ್ರಶ್ನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಬರೆದಿದ್ದು ಅದು ಶಿಕ್ಷಣ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇವೆ.